ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 1.

ಬೆಂಗಳೂರು, ಗುರುವಾರ, ಜನವರಿ ತಾ. 7, ಸನ್ 1909

II ನೆ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗ್ಯೆರೆಯಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟ್ಲ್‌ಮೆಂಟ್ ಡಿಪಾರ್ಟ್‌ಮೆಂಟು.

ಇಸ್ತಿಹಾರ್‌ನಾಮೆ.

ನಂಬರ್ 426, ತಾರೀಖು 11ನೆ ಡಿಸೆಂಬರ್ 1908.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಶಿವಮೊಗ್ಗ ಡಿಸ್ಟ್ರಿಕ್ಟ್ ಶಿಕಾರಿಪುರದ ತಾಲ್ಲೂಕಿಗೆ ಸೇರಿದ 174 ಸರಕಾರಿ ಗ್ರಾಮಗಳಿಗೆ ರಿವಿಜ್ ಯಾನೆ ತಿದ್ದುಪಡಿಯಾದ ಆಕಾರವನ್ನು ಗವರ್ನಮೆಂಟಿನವರು ಮಂಜೂರ್ಮಾಡಿರುವದರಿಂದ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡ್ 113ನೆ ಸೆಕ್ಷನ್ ಪ್ರಕಾರ ಸದರಿ ತಿದ್ದುಪಡಿಯಾದ ಆಕಾರವನ್ನು ಫಾಯಿಷ್ ಮಾಡತಕ್ಕ ರಿವಿಜ್ ಸೆಟ್ಲ್‌ಮೆಂಟ್ ಕೆಲಸವು ಈಸಬಾ ಶಿಕಾರಿಪುರದ ಮೊಕ್ಕಾಂನಲ್ಲಿ 1909ನೆ ಜನವರಿ ತಾರೀಖು 11 ರಲ್ಲು ಅಥವಾ ಆ ಸುಮಾರಿಗೆ ಪ್ರಾರಂಭಿಸಲ್ಪಡುವದು

ಡಿ. ಶಾಮರಾವ್,
ರೆವಿನ್ಯೂ ಸರ್ವೆ ಮತ್ತು ಸೆಟ್ಲ್‌ಮೆಂಟ್ ಸೂಪರ್‌ಟಿಂಡೆಂಟ್.

ಫಾರೆಸ್ಟ್ ಇಲಾಖೆ.

ಇಸ್ತಿಹಾರ್.

ತಾರೀಖು 31ನೆ ಡಿಸೆಂಬರ್ 1908.

ಇದರಿಂದ ತಿಳಿಯಪಡಿಸುವುದೇನಂದರೆ—ಈ ಕೆಳಗೆ ನಮೂದಿರತಕ್ಕ ಮಾಲುಗಳು ಚೆನ್ನಗಿರಿ ರೇಂಜು ಕುಕ್ವಾಡ ಉಬ್ರಾಣಿ ಮನ್ನೆ ಮತ್ತು ಡಿಸ್ಟ್ರಿಕ್ಟು ಜಂಗ್ಲಿಯಲ್ಲಿ ಸಿಕ್ಕಿವೆ. ಯಾರಾದರೂ ವಾರಸ್ದಾರರು ಇದ್ದರೆ ಈ ಇಸ್ತಿಹಾರ್ ತಾರೀಖಿನಿಂದ ಒಂದು ತಿಂಗಳು ವಾಯಿದೆ ಒಳಗೆ ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರ ರೂಬು ರೂಬು ಹಾಜರಾಗಬೇಕು. ಹಾಗೆ ಯಾರೂ ಹಾಜರಾಗದೇ ಇದ್ದರೆ ಸದರಿ ಮಾಲುಗಳು ಸರ್ಕಾರಿಕ್ಕೆ ಸೇರಿಸಲ್ಪಡುತ್ತೆ. ನಂತರ ಯಾವ ಹಕ್ಕೂ ಅಂಗೀಕರಿಸಲ್ಪಡುವುದಿಲ್ಲಾ.

ಮಾಲಿನ ವಿವರ.	ಅದದು.	ಸಲೆ ಅಡಿ	ಎಲ್ಲಿ ಸಿಕ್ಕಿದ್ದು.	ಯಾರ ಸುಪರ್ದಿನಲ್ಲಿದೆ.
ಚಕಡೀ ಗಾಡಿ (ಎರಡು ಎತ್ತಿನದು).	1	...	ಕುಕ್ವಾಡ ಉಬ್ರಾಣಿ ಮನ್ನೆ ಜಂಗ್ಲಿ ಶಿವಮೊಗ್ಗ ಡಿಸ್ಟ್ರಿಕ್ಟು.	ಲಕೆ ಹಳ್ಳಿ ಪಟೇಲ್ ಕರಿಬಸಪ್ಪ
ಸಾಗುವಾನಿ ಬೆಲಗು ...	7	38½	ಡಿಟೋ ...	ಡಿಟೋ
ಡಿಟೋ ...	2	7½	ಮರುವಂಜಿ ಡಿಸ್ಟ್ರಿಕ್ಟು ಜಂಗ್ಲಿ ಚನ್ನಗಿರಿ ರೇಂಜ್.	ಮರುವಂಜಿ ಪಟೇಲ ಮರಳು ಸಿದ್ದಪ್ಪ.

ಎ. ಪೊನ್ನಸಾಮಿ ಮೊದಲಿಯಾರ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟು